ದಿನಾಂಕಃ 27-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- ವಾದಿ ಪರವಾಗಿ ಶ್ರೀ. ಎಸ್.ಎನ್. ವಕೀಲರಿಂದಃ-**

ನನ್ನ ತಾತನ ಹೆಸರು ಕೆಂಚಪ್ಪ. ನಾನು ಪಿ.ಯು.ಸಿ.ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಐಟಂ ನಂ.2 ರಿಂದ 6 ರ ಆಸ್ತಿಗಳು ಈ ಹಿಂದೆ ನನ್ನ ತಾಯಿಯ ಹೆಸರಿನಲ್ಲಿದ್ದವು ಎಂದರೆ ಸರಿ. ನನ್ನ ತಾಯಿ 2000 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿ ಮೃತಪಟ್ಟ ನಂತರ ನಾನು ಮತ್ತು 1 ನೇ ಪ್ರತಿವಾದಿರವರು ದಾವಾ ಐಟಂ ನಂ.2 ರಿಂದ 6 ರ ಆಸ್ತಿಗಳನ್ನು ನಮ್ಮಗಳ ಹೆಸರಿಗೆ ಪೌವತಿ ಖಾತೆ ಮಾಡಿಕೊಂಡಿದ್ದೇವೆ ಎಂದರೆ ಸರಿ. ಈ ರೀತಿ ಖಾತಾ ಬದಲಾವಣ ಮಾಡುವ ಸಮಯದಲ್ಲಿ ನಾನು ವಾದಿಯರ ಸಮ್ಮತಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ವಾದಿಯರು ಈ ದಾವೆಯನ್ನು ಎಷ್ಟು ಆಸ್ತಿಗಳ ಮೇಲೆ ಸಲ್ಲಿಸಿದ್ದಾರೆ ಎಂಬುದನ್ನು ನಾನು ನಮ್ಮ ವಕೀಲರನ್ನು ಕೇಳಿ ತಿಳಿದುಕೊಂಡಿರುತ್ತೇನೆ.ಈ ದಾವೆ ಸಲ್ಲಿಸಿದ ನಂತರ ದಾವಾ ಆಸ್ತಿಗಳ ಖಾತೆ ಮತ್ತು ಪಹಣಿಗಳನ್ನು ತೆಗೆಸಿ ನೋಡಿರುತ್ತೇನೆ. ಆ ಸಮಯದಲ್ಲಿ ಕೆಲವು ಆಸ್ತಿಗಳು ನನ್ನ ಹೆಸರಿನಲ್ಲಿ, ಪ್ರತಿವಾದಿಯರ ಹೆಸರಿನಲ್ಲಿ ಮತ್ತು ನನ್ನ ತಾಯಿಯ ಹೆಸರಿನಲ್ಲಿರುವುದು ಕಂಡು ಬಂದಿತು. ದಾವಾ ಐಟಂ ನಂ.15 ರ ಸರ್ವೆ ನಂಬರ್ 65 ವಿಸ್ತೀರ್ಣ 7 ಎಕರೆ 17 ಗುಂಟೆ ಆಸ್ತಿ ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು. ದಾವಾ ಐಟಂ ನಂ.16 ರ ಸರ್ವೆ ನಂಬರ್ 68 ವಿಸ್ತೀರ್ಣ 2 ಎಕರೆ 4 ಗುಂಟೆ ಆಸ್ತಿ ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು. ದಾವಾ ಐಟಂ

ನಂ.19 ರ ಸರ್ವೆ ನಂಬರ್ 73/1 ವಿಸ್ತೀರ್ಣ 3 ಎಕರೆ 32 ಗುಂಟೆ ಆಸ್ತಿ ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು. ಈ ಆಸ್ತಿಗಳ ಒಟ್ಟು ವಿಸ್ತೀರ್ಣ 14 ಎಕರೆ ನನ್ನ ತಂದೆಯ ಹೆಸರಿನಲ್ಲಿತ್ತು. ಆ ಜಮೀನುಗಳಲ್ಲಿ ನನ್ನ ತಂದೆ ದಾಳಿಂಬೆ, ತೆಂಗು, ಅಡಿಗೆ ಹಾಗೂ ಇತರೆ ಬೆಳೆಗಳನ್ನು ಬೆಳೆಯುತ್ತಿದ್ದರು ಎಂದರೆ ಸರಿ. ಈ ಬೆಳೆಗಳಿಂದ ನನ್ನ ತಂದೆಯವರಿಗೆ ಸಾಕಷ್ಟು ಆದಾಯ ಬರುತ್ತಿತ್ತು. ನನ್ನ ತಂದೆ ಮೃತಪಟ್ಟ ನಂತರವೂ ಸಹ ಅದೇ ರೀತಿ ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ಆ ಜಮೀನುಗಳಲ್ಲಿ ದಾಳಿಂಬೆ, ತೆಂಗು, ಅಡಿಗೆ ಹಾಗೂ ಇತರೆ ಬೆಳೆಗಳನ್ನು ಬೆಳೆಯುತ್ತಿದ್ದೆವು ಎಂದರೆ ಸರಿಯಲ್ಲ.

ನನ್ನ ತಾಯಿಯ ಹೆಸರಿನಲ್ಲಿ ಸುಮಾರು 13 ಎಕರೆಯಷ್ಟು ಜಮೀನು ಇತ್ತು ಎಂದರೆ ಸರಿ. ಆ ಜಮೀನುಗಳಿಂದ ಸಾಕಷ್ಟು ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ನನ್ನ ತಂದೆಯವರು ಮೃತಪಟ್ಟ ನಂತರ ಅವರ ಹೆಸರಿನಲ್ಲಿದ್ದ ಆಸ್ತಿಗಳನ್ನು ನನ್ನ ಹಾಗೂ 1 ನೇ ಪ್ರತಿವಾದಿಯ ಹೆಸರಿಗೆ ಜಂಟಿ ಖಾತೆ ಮಾಡಿಸಿಕೊಂಡೆವು ಎಂದರೆ, ಸಾಕ್ಷಿಯು, ನನ್ನ ತಾಯಿಯವರ ಹೇಳಿಕೆ ಮೇರೆಗೆ ಜಂಟಿ ಖಾತೆ ಮಾಡಿಸಿಕೊಂಡೆವು ಎಂದು ಸ್ವತಃ ನುಡಿಯುತ್ತಾರೆ. ಆ ಸಮಯದಲ್ಲಿ ನಾವು ವಾದಿಯವರು ಸಮ್ಮತಿಯನ್ನು ಪಡೆದುಕೊಂಡಿರುವುದಿಲ್ಲ. ನಾನು 1964 ನೇ ಸಾಲಿನಲ್ಲಿ ಜನಿಸಿರುತ್ತೇನೆ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ 2025 ನೇ ಸಾಲಿನಲ್ಲಿ ನನಗೆ 59 ವರ್ಷ ವಯಸ್ಸಾಗಿರುವುದಾಗಿ ನಮೂದಿಸಿರುತ್ತೇನೆ. ನಾನು

1966 ರಲ್ಲಿ ಜನಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮಧುಗಿರಿಯ ಸರ್ಕಾರಿ ಶಾಲೆಯಲ್ಲಿ ಮಾಡಿರುತ್ತೇನೆ. ನಾನು 10 ನೇ ತರಗತಿ ವಿದ್ಯಾಭ್ಯಾಸವನ್ನು ಯಾವ ವರ್ಷದಲ್ಲಿ ಮಾಡಿರುತ್ತೇನೆ ಎಂಬುದು ನನಗೆ ಈಗ ನೆನಪಿಲ್ಲ. ನಾನು 1981-82 ನೇ ಸಾಲಿನಲ್ಲಿ ಮಧುಗಿರಿಯ ಹೈಸ್ಕೂಲ್ ನಲ್ಲಿ 10 ನೇ ತರಗತಿ ಓದತ್ತಿದ್ದೆ ಎಂದರೆ ಸರಿಯಲ್ಲ. ನನ್ನ 10 ನೇ ತರಗತಿಯ ಅಂಕಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಪಿ.ಯು.ಸಿ. ವಿದ್ಯಾಭ್ಯಾಸವನ್ನು ಗೌರಿಬಿದನೂರಿನಲ್ಲಿ ಮುಗಿಸಿರುತ್ತೇನೆ. ನಾನು ಡಿಫಾರ್ಮ ವಿದ್ಯಾಭ್ಯಾಸಕ್ಕೆ ತುಮಕೂರಿನ ಶ್ರೀ ಕೃಷ್ಣ ಫಾರ್ಮಸಿ ಕಾಲೇಜಿಗೆ ಸೇರಿದ್ದೆನು. ನಾನು 1984-85 ನೇ ಸಾಲಿನಲ್ಲಿ ಡಿಫಾರ್ಮಗೆ ದಾಖಲಾಗಿದ್ದೆನು.

ನಾನು ಹಾಜರುಪಡಿಸಿರುವ ನಿಡಿ.50 ರ ಕ್ರಯಪತ್ರದಲ್ಲಿ ಕೆಲವು ಆಸ್ತಿಗಳು ನನ್ನ ಹೆಸರಿಗೆ ಕ್ರಯದ ಮೂಲಕ ಬಂದಿರುತ್ತವೆ ಎಂದು ಸಲ್ಲಿಸಿರುತ್ತೇನೆ. ಆ ಕ್ರಯಪತ್ರದಲ್ಲಿ ದಾವಾ ಐಟಂ ನಂ.20 ರಿಂದ 24 ಆಸ್ತಿಗಳು ನನ್ನ ಹೆಸರಿಗೆ ಕ್ರಯ ಆಗಿರುವ ಬಗ್ಗೆ ನಿಡಿ.50 ರಲ್ಲಿ ಕಂಡುಬಂದಿರುತ್ತದೆ ಎಂದರೆ ಸರಿ. ಆ ಕ್ರಯಪತ್ರವು 1981-82 ನೇ ಸಾಲಿನಲ್ಲಿ ಆಗಿರುತ್ತದೆ. 1981-82 ನೇ ಸಾಲಪಿಗೆ ನನಗೆ 16 ವರ್ಷ ವಯಸ್ಸಾಗಿತ್ತು. ಆ ಸಮಯದಲ್ಲಿ ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದೆನು. ನಾನು ಆ ಅವಧಿಗೆ 16 ವರ್ಷ ವಯಸ್ಕನಾಗಿದ್ದು, ನಮ್ಮ ಒಟ್ಟು

ಕುಟುಂಬದ ಆಸ್ತಿಗಳಿಂದ ಬಂದ ಆದಾಯದಿಂದ ನಿಡಿ.50 ರ ಕ್ರಯಪತ್ರದಲ್ಲಿ ನಮೂದಿಸಿರುವ ಆಸ್ತಿಗಳನ್ನು ಖರೀದಿಸಿದ್ದೆನು ಎಂದರೆ ಸರಿ. ಆನಂತರ ಸಾಕ್ಷಿಯು ನಾನು ಸ್ವಯಾರ್ಜಿತವಾಗಿ ತೆಗೆದುಕೊಂಡಿದ್ದೇನೆ ಎಂದು ಸ್ವತಃ ನುಡಿಯುತ್ತಾರೆ. ಆ ಆಸ್ತಿಗಳನ್ನು ನಾನು ರೂ.1,20,000/-ಗಳಿಗೆ ಖರೀದಿಸಿರುತ್ತೇನೆ. ನಾನು 16 ನೇ ವಯಸ್ಸಿಗೆ ಅಡಿಕೆ, ತೆಂಗು ಮತ್ತು ಸೀಬೆಹಣ್ಣು ವ್ಯಾಪಾರ ಮಾಡುತ್ತಿದ್ದೆನು. ನಾನು ಶಾಲೆ ಮುಗಿಸಿ ಸಾಯಂಕಾಲದ ಸಮಯದಲ್ಲಿ ವ್ಯಾಪಾರ ಮಾಡುತ್ತಿದ್ದೆನು. ನನ್ನ ತಂದೆ ತಾಯಿಯರೇ ನನ್ನನ್ನು ವ್ಯಾಪಾರ ಮಾಡಲು ಕಳುಹಿಸುತ್ತಿದ್ದರು. ಆ ವ್ಯಾಪಾರದಿಂದ ನನಗೆ ದಿನಕ್ಕೆ ರೂ.200/- ರಿಂದ 300/- ಆದಾಯ ಬರುತ್ತಿತ್ತು. ನಾನು 7 ನೇ ತರಗತಿ ಓದುತ್ತಿದ್ದ ಸಮಯದಿಂದಲೂ ಸಹ ವ್ಯಾಪಾರ ಮಾಡಲು ಪ್ರಾರಂಭಿಸಿದೆನು. ನಾನು ವ್ಯಾಪಾರ ಮಾಡುತ್ತಿದ್ದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಆ ವ್ಯಾಪರದಿಂದ ಬಂದ ಹಣವನ್ನು ನಾನು ಯಾವುದೇ ಬ್ಯಾಂಕಿನಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ. ನಾನು ಆ ಸಮಯದಲ್ಲಿ ಯಾವುದೇ ವ್ಯಾಪಾರ ಮಾಡುತ್ತಿರಲಿಲ್ಲ, ಕೇವಲ ವಿದ್ಯಾಭ್ಯಾಸವನ್ನು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ನಮ್ಮ ಒಟ್ಟು ಕುಟುಂಬದ ಆಸ್ತಿಗಳಿಂದ ಬಂದ ಆದಾಯದಿಂದಲೇ ನಿಡಿ.50 ರ ಕ್ರಯಪತ್ರದಲ್ಲಿ ನಮೂದಿಸಲಾದ ಆಸ್ತಿಗಳನ್ನು ಖರೀದಿಸಿದ್ದರೂ ಸಹ ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಸ್ವಯಾರ್ಜಿತವಾಗಿ ಖರೀದಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಇತರೆ ಯಾವುದೇ

ಆಸ್ತಿಗಳನ್ನು ನಾನು ಖರೀದಿಸಿದ್ದರೂ ಸಹ ಒಟ್ಟು ಕುಟುಂಬದ ಆಸ್ತಿಗಳಿಂದ ಬಂದ ಆದಾಯದಿಂದಲೇ ಖರೀದಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಖರೀದಿಸಿದ ಆಸ್ತಿಗಳನ್ನು ಒಟ್ಟು ಕುಟುಂಬದ ಆಸ್ತಿಗಳಿಂದ ಬಂದ ಆದಾಯದಿಂದಲೇ ಖರೀದಿಸಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಂದೆ ಮತ್ತು ತಾಯಿಯರು ಯಾವುದೇ ಮರಣ ಶಾಸನ ಮಾಡದೇ ಮೃತಪಟ್ಟಿರುತ್ತಾರೆ. ನನ್ನ ತಂದೆ ತಾಯಿಯರು ಯಾವುದೇ ವಿಲ್ ಮಾಡದೇ ಮೃತಪಟ್ಟ ನಂತರ ಅವರ ಎಲ್ಲಾ ವಾರಸುದಾರರಿಗೂ ಆ ಆಸ್ತಿಗಳಲ್ಲಿ ಸಮಾನವಾದ ಹಕ್ಕಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ಎಲ್ಲಾ ವಾದಿಯರು, ನಾನು, ಹಾಗೂ ಇತರೆ ಪ್ರತಿವಾದಿಯರು ಜಂಟಿ ಸ್ವಾಧೀನಾನುಭವ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಖಾತಾ ಮತ್ತು ಪಹಣಿಯನ್ನು ವಾದಿಯರಿಗೆ ಗೊತ್ತಿಲ್ಲದ ಹಾಗೆ ನಾನು ಮತ್ತು 1 ನೇ ಪ್ರತಿವಾದಿಯೇ ನಮ್ಮಗಳ ಹೆಸರಿಗೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನನ್ನ ಮತ್ತು 1 ನೇ ಪ್ರತಿವಾದಿಯ ಹೆಸರಿಗೆ ಖಾತ ಬದಲಾವಣೆ ಮಾಡಿಸಿಕೊಳ್ಳುವ ಸಮಯದಲ್ಲಿ ವಾದಿಯರಿಂದ ಲಿಖಿತವಾಗಿ ಅನುಮತಿ ಪಡೆದುಕೊಂಡಿರುವುದಿಲ್ಲ. ನನ್ನ ತಂದೆ ತಾಯಿಯರು ಮರಣ ಹೊಂದಿದ ನಂತರ ದಾವಾ ಆಸ್ತಿಗಳ ಖಾತೆ ನನ್ನ ಮತ್ತು 1 ನೇ ಪ್ರತಿವಾದಿಯ ಹೆಸರಿಗೆ ಜಂಟಿಯಾಗಿ ಆಗಿರುತ್ತವೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಗಳಲ್ಲಿಯೂ ಸಹ ವಿಭಾಗವಾಗಿರುವ ಬಗ್ಗೆ ನಮೂದಾಗಿರುವುದಿಲ್ಲ. ನನ್ನ

ಮತ್ತು 1 ನೇ ಪ್ರತಿವಾದಿಯ ನಡುವೆ ದಾವಾ ಆಸ್ತಿಗಳಲ್ಲಿ ವಿಭಾಗ ಆಗಿದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಆ ವಿಭಾಗ 1982 ರಲ್ಲಿ ಆಗಿರುತ್ತದೆ. ಈ ಬಗ್ಗೆ ಬರವಣಿಗೆ ಆಗಿರುವುದಿಲ್ಲ. 1982 ನೇ ಸಾಲಿನಲ್ಲಿ ದಾವಾ ಆಸ್ತಿಗಳಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ, ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಪುಟ ಸಂಖ್ಯೆ 2 ರಲ್ಲಿ ದಿಃ 08.09.2000 ಮತ್ತು 22.04.2001 ರಂದು ಆಸ್ತಿ ಖರೀದಿಸಿರುವ ಬಗ್ಗೆ ನಮೂದಾಗಿರುತ್ತದೆ ಎಂದರೆ, ಸಾಕ್ಷಿಯು, ಸರ್ವೆ ನಂಬರ್ 72/5 ರ ಆಸ್ತಿಯನ್ನು 2000 ನೇ ಸಾಲಿನಲ್ಲಿ ಖರೀದಿಸಿರುತ್ತೇನೆ. ಆದರೆ 2001 ನೇ ಸಾಲಿನಲ್ಲಿ ಯಾವುದೇ ಆಸ್ತಿಯನ್ನು ಖರೀದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ 2000 ನೇ ಇಸವಿಯಲ್ಲಿ ಆಸ್ತಿ ಖರೀದಿಸಿರುವ ಬಗ್ಗೆ ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ಎಲ್ಲಾ ವಾದಿಯರಿಗೂ ಸಮಾನವಾದ ಹಕ್ಕಿದೆ ಎಂದರೆ ನನಗೆ ಗೊತ್ತಿಲ್ಲ.

ನಾನು 200 ನೇ ಇಸವಿಯಲ್ಲಿ ಖರೀದಿಸಲಾದ ಸರ್ವೆ ನಂಬರ್ 72/5 ರ ಆಸ್ತಿಯನ್ನು ಒಟ್ಟು ಕುಟುಂಬದ ಆಸ್ತಿಗಳಿಂದ ಬಂದ ಆದಾಯದಿಂದ ಖರೀದಿಸಿರುವುದಿಲ್ಲ. ನಾನು ವಾದಿಯರಿಗೆ ಭಾಗ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಾನು ಮತ್ತು 1 ನೇ ಪ್ರತಿವಾದಿ ಸ್ವಾಧೀನಾನುಭವ ಹೊಂದಿದ್ದೇವೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನ್ನ ಹೆಂಡತಿಯಾಗಿದ್ದು, ಅವರು ನನ್ನ ಸಹೋದರಿ ಜಯಮ್ಮನವರ ಮಗಳಾಗಿರುತ್ತಾರೆ. ನಾನು ಒಟ್ಟು ಕುಟುಂಬದ ಜಮೀನುಗಳ ಆದಾಯದಿಂದ ಬಂದ ಹಣದಿಂದ ಇತರೆ ಆಸ್ತಿಗಳನ್ನು ಖರೀದಿಸಿದ್ದರೂ ಸಹ ನಾನು ಸ್ವಯಾರ್ಜಿತವಾಗಿ ಸಂಪಾದಿಸಿದ ಹಣದಿಂದ ಖರೀದಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಗಳು ಪಿತ್ರಾರ್ಜಿತವಾದ ಆಸ್ತಿಗಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ